## ಬಂಗಾರ-ಸಿಂಗಾರ

ರಾಜು ಮತ್ತು ಅವನ ಹೆಂಡತಿ ಸೀತಾ ಮದುವೆಯೊಂದಕ್ಕೆ ಹೋಗಿದ್ದರು. ಮದುವೆ ತುಂಬಾ ಭರ್ಜರಿಯಾಗಿ ನಡೆಯುತ್ತಿತ್ತು. ಮದುವೆ ನೋಡಿ ಸೀತಾ ಧನ್ಯಳಾದಳು. ಅಕ್ಷತೆ ಹಾಕಿ, ಉಡುಗೊರೆ ಕೊಟ್ಟು, ಊಟ ಮಾಡಿ ಮನೆಗೆ ಬಂದರು. ಸಂಜೆಯಾದರೂ ಆ ಮದುವೆಯ ಗುಂಗಿನಲ್ಲಿಯೇ ಇದ್ದ ಸೀತಾ, 'ರೀ, ಹುಡುಗಿ ಎಷ್ಟು ಚೆಂದ ಇದ್ದಳು ಅಲ್ವಾ? ಮದುವೆ ಅಂತೂ... ಎಷ್ಟು ಚೆನ್ನಾಗಿ ಆಯಿತು. ನಿಮಗೆ ಹೇಗನಿಸಿತು?' ಎಂದಳು. 'ಏನಂತ ಹೇಳಲಿ ಸೀತಾ? ಹೊಳೆದದ್ದು ಬಂಗಾರ, ಉಳಿದದ್ದು ಸಿಂಗಾರ' ಎಂದ ರಾಜು.

**ನರಸಿಂಹ ಪೈ**





ಕಲೆ: ಗಣೇಶ ಆಚಾರ್ಯ

## ತರ್ಜುಮೆ

ಸ್ಕೌಟ್ ಮಾಸ್ಟರ್ 'ರೈಟ್ ಅಬೌಟ್ ಟರ್ನ್' ಎಂದಾಗಲೆಲ್ಲಾ ಪೋಲಿ ಕಿಟ್ಟಿ ಎಷ್ಟೊ ಹೊತ್ತಿನ ನಂತರ ತಿರುಗುತ್ತಿದ್ದ. ಒಂದೆರಡು ಬಾರಿ ಸುಮ್ಮನಿದ್ದ ಸ್ಕೌಟ್ ಮಾಸ್ಟರ್. ಕಿಟ್ಟಿ ಪದೇಪದೇ ಹಾಗೇ ಮಾಡಿದಾಗ ಕುಪಿತನಾಗಿ, 'ಏನೊ ಅಷ್ಟೊಂದು ತಡವಾಗಿ ತಿರುಗ್ತೀಯ? ಹೇಳಿದ ತಕ್ಷಣ ತಿರುಗಲು ಆಗಲ್ಲವೇನೊ?' ಎಂದು ರೇಗಿದರು. 'ಸರ್, ನೀವು ಇಂಗ್ಲಿಷಿನಲ್ಲಿ ಹೇಳಿದ ಆಜ್ಞೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿಕೊಂಡು ಪಾಲಿಸಬೇಕಾದರೆ ಅಷ್ಟು ಸಮಯ ಆಗೇ ಬಿಡುತ್ತೆ ಸರ್...' ಎಂದ ತುಂಟ ಕಿಟ್ಟಿ!

**ಮಲ್ಲಿಕಾರ್ಜುನ ಬಗಲಿ**